**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.**

**ಸಿಸಿ ಸಂಖ್ಯೆ ಃ 752/2025**

ಪಿರ್ಯಾದುದಾರರು ಃ ಬಿಳಿಗೆರೆ ಪೊಲೀಸ್ ಠಾಣೆ, ನಂಜನಗೂಡು

ವಿರುದ್ದ

ಆರೋಪಿಗಳುಃ

ಮಹೇಶ್ ಬಿನ್.ಕುಮಾರ , 30 ವರ್ಷ
ವಾಸಃ ಗೆಜ್ಜನಹಳ್ಳಿ, ನಂಜನಗೂಡು ತಾಲ್ಲೂಕು

*** *** ***

ಆಪಾದನೆ

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ:-

ದಿನಾಂಕಃ13.02.2025 ರಂದು ಸುಮಾರು 20.00 ಗಂಟೆ ಸಮಯದಲ್ಲಿ ನಂಜನಗೂಡು ತಾಲ್ಲೂಕು ಬಿಳಿಗೆರೆ ಸೋನಹಳ್ಳಿ ಮುಖ್ಯ ರಸ್ತೆ ಸೋನಹಳ್ಳಿಯ ಶಿವಪ್ಪ ಎಂಬುವವರ ಜಮೀನಿನ ಮುಂಭಾಗ ಸುರೇಶ ಎಂಬುವವರು ಕೆಎ-11-ಎಸ್-4541 ಬೈಕಿನಲ್ಲಿ ಸೋನಹಳ್ಳಿ ಕಡೆಯಿಂದ ಬಿಳಿಗೆರೆ ಕಡೆಗೆ ರಸ್ತೆಯ ಎಡಭಾಗ ಬರುತ್ತಿದ್ದಾಗ, ಆರೋಪಿಯಾದ ನೀವು ಕೆಎ-36-ಟಿಸಿ-1322 ನಂಬರಿನ ಟ್ರಾಕ್ಟರ್ ಮತ್ತು ಕೆಎ-55-ಟಿ-1234 ಟ್ರೇಲರನ ಚಾಲಕನಾಗಿದ್ದು, ಸದರಿ ವಾಹನವನ್ನು ಬಿಳಿಗೆರೆ ಕಡೆಯಿಂದ ಸೋನಹಳ್ಳಿ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವನ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಾಲನೆ

ಮಾಡಿಕೊಂಡು ಬಂದು ಸುರೇಶ ರವರ ಬೈಕಿಗೆ ಡಿಕ್ಕಿ ಮಾಡಿ ಅಪಘಾತ ಪಡಿಸಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಮಾಡಿದ ಸದರಿ ಅಪಘಾತದಿಂದ ಸುರೇಶ ರವರಿಗೆ ತಲೆ, ಮೈಕೈಗೆ ಹಾಗೂ ಇತರೆ ಕಡೆ ಪೆಟ್ಟಾಗಿ ಅವರು ಸ್ಥಳದಲ್ಲೇ ಮೃತಪಟ್ಟಿರುತ್ತಾರೆ. ಆದ್ದರಿಂದ, ಆರೋಪಿಯಾದ ನೀವು ಅಪರಾಧಿಕ ಮಾನವ ಹತ್ಯೆ ಎಂದು ಪರಿಗಣಿಸಲಾಗದ ದುಡುಕಿನ ಮತ್ತು ನಿರ್ಲಕ್ಷ್ಯತನದ ವಾಹನ ಚಾಲನೆ ಮಾಡಿ ಮೇಲೆ ಹೇಳಿದ ವ್ಯಕ್ತಿಯ ಮರಣವನ್ನುಂಟು ಮಾಡಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.106(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ಆಪಾದಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಸದರಿ ಅಪಘಾತದ ನಂತರ ವಾಹನವನ್ನು ನಿಲ್ಲಿಸದೆ, ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೆ ಹಾಗೂ ಅಪಘಾತದ ಮಾಹಿತಿಯನ್ನು ಮಾಹಿತಿಯನ್ನು ಪೊಲೀಸರಿಗೆ ನೀಡಿದೆ ಹೊರಟುಹೋದ ಕಾರಣ ಭಾರತೀಯ ಮೋಟಾರು ಕಾಯಿದೆ ಕಲಂ 187 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

1. **ಈಗ ನಿಮಗೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪ ನಿಮಗೆ ತಿಳಿಯಿತೇ?**
   **ಉಃ**

2. **ನಿಮ್ಮ ಮೇಲಿರುವ ಆರೋಪವನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ಪರವಾಗಿ ವಿಚಾರಣೆ ನಡೆಸಲು ಬಯಸುವಿರಾ?**
   **ಉಃ**

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 17.09.2025 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

**1ನೇ ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ನಂಜನಗೂಡು.